ಕರ್ನಾಟಕ ಸರ್ಕಾರ

# ರಾಷ್ಟ್ರೀಯ ಆರೋಗ್ಯ ಅಭಿಯಾನ

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ

## ಆನಂದರಾವ್ ವೃತ್ತ, ಬೆಂಗಳೂರು-560009

**NO. RO (RCH)/74/2019-20** **Date: 30.03.2020**

### ಅಧಿಕೃತ ಜ್ಞಾಪನಾ ಪತ್ರ

**ವಿಷಯ:** ಮುಂಚೂಣಿ ಆರೋಗ್ಯ ಕಾರ್ಯಕರ್ತೆಯರಿಗೆ ಸಮುದಾಯ ಮಟ್ಟದಲ್ಲಿ ಕೋವಿಡ್-19 ರೋಗ ನಿಯಂತ್ರಣ ಮತ್ತು ನಿರ್ವಹಣೆ ಕುರಿತು ಪ್ರಾಥಮಿಕ ಆರೋಗ್ಯ ಕೇಂದ್ರ/ ಆರೋಗ್ಯ ಮತ್ತು ಕ್ಷೇಮ ಕೇಂದ್ರ/ಆರೋಗ್ಯ ಉಪಕೇಂದ್ರದಲ್ಲಿ ಮುಖಾಮುಖಿ ತರಬೇತಿಯನ್ನು ಆಯೋಜಿಸುವ ಬಗ್ಗೆ.

**ಉಲ್ಲೇಖ :** ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯದ ಜಂಟಿ ಕಾರ್ಯದರ್ಶಿಗಳು ದಿ॥ 26.03.2020 ರಂದು ಬರೆದ ಪತ್ರ.

* * * * * *

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ ಸರ್ವವ್ಯಾಪಿ ಸಾಂಕ್ರಮಿಕ ರೋಗವಾಗಿ ಮಾನವ ಜೀವ ಸಂಕುಲವನ್ನು ಭಾದಿಸುತ್ತಿರುವ ಕೋವಿಡ್-19 ರೋಗವನ್ನು ಸಮುದಾಯ ಮಟ್ಟದಲ್ಲಿ ನಿಯಂತ್ರಣ ಮತ್ತು ನಿರ್ವಹಣೆಗೆ ಅನುಸರಿಬೇಕಾದ ಕ್ರಮಗಳ ಕುರಿತು ಮುಂಚೂಣಿ ಆರೋಗ್ಯ ಕಾರ್ಯಕರ್ತೆಯರಿಗೆ ಪ್ರಾಥಮಿಕ ಆರೋಗ್ಯ ಕೇಂದ್ರ/ ಆರೋಗ್ಯ ಮತ್ತು ಕ್ಷೇಮ ಕೇಂದ್ರ/ಆರೋಗ್ಯ ಉಪಕೇಂದ್ರದ ವ್ಯಾಪ್ತಿಯಲ್ಲಿ ಮುಖಾಮುಖಿ ತರಬೇತಿಯನ್ನು ದಿನಾಂಕ: 04.04.2020 ರಿಂದ 06.04.2020 ರವರೆಗೆ ಆಯೋಜಿಸಬೇಕಾಗಿದ್ದು, ಈ ತರಬೇತಿಗೆ ಪೂರ್ವಭಾವಿಯಾಗಿ ತಾಲ್ಲೂಕು ಮಟ್ಟದಲ್ಲಿ ತರಬೇತುದಾರರ ತರಬೇತಿಯನ್ನು ಆಯೋಜನೆ ಮಾಡಬೇಕಾಗಿದೆ. ಈ ಹಿನ್ನೆಲೆಯಲ್ಲಿ ದಿನಾಂಕ: 03.04.2020 ರಂದು ಡಿ.ಎಸ್.ಇ.ಆರ್.ಟಿ ಯ ಎಜುಸ್ಯಾಟ್ ಸ್ಟುಡಿಯೋ ಮುಖೇನ ಸಮಗ್ರ ಶಿಕ್ಷಣ ಅಭಿಯಾನದಡಿ ತಾಲ್ಲೂಕು/ವಲಯ ಮಟ್ಟದಲ್ಲಿ ಸ್ಥಾಪನೆಯಾಗಿರುವ ಕ್ಷೇತ್ರ ಸಂಪನ್ಮೂಲ ಕೇಂದ್ರಗಳಲ್ಲಿನ ಸ್ವೀಕೃತಿ ಕೇಂದ್ರಗಳಲ್ಲಿ ಆಯೋಜನೆ ಮಾಡಲಾಗಿದ್ದು, ಕೆಳಕಂಡ ಕ್ರಮಗಳನ್ನು ಅನುಸರಿಸಲು ಸೂಚಿಸಲಾಗಿದೆ.

1. ಪ್ರತಿ ಸಾರ್ವಜನಿಕ ಆರೋಗ್ಯ ಸಂಸ್ಥೆ (ಪ್ರಾಥಮಿಕ ಆರೋಗ್ಯ ಕೇಂದ್ರ/ನಗರ ಪ್ರಾಥಮಿಕ ಆರೋಗ್ಯ ಕೇಂದ್ರ) ಯಿಂದ ಮೂರು ತರಬೇತುದಾರರ ತಂಡವನ್ನು ಗುರುತಿಸಿ ನಿಯೋಜನೆ ಮಾಡುವುದು.ಈ ತಂಡದಲ್ಲಿ ತಲಾ ಒಬ್ಬರು ವೈದ್ಯಾಧಿಕಾರಿಗಳು, ಅಂಗನವಾಡಿ ಮೇಲ್ವಿಚಾರಕರು ಮತ್ತು ಹಿರಿಯ/ಕಿರಿಯ ಮಹಿಳಾ ಆರೋಗ್ಯ ಸಹಾಯಕರು ಇರಬೇಕು.

2. ತರಬೇತಿಯು ಮೂರು ಗಂಟೆಗಳ ಅವಧಿಯಾಗಿದ್ದು, (ಬೆಳಗ್ಗೆ 10.00 ರಿಂದ 01.00 ಮತ್ತು 02.00 ರಿಂದ 05.00 ಗಂಟೆ) ಎರಡು ಅಧಿವೇಶನಗಳಲ್ಲಿ ತರಬೇತಿಯನ್ನು ನಿರ್ವಹಣೆ ಮಾಡಲಾಗುವುದು.
3. ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಪ್ರತಿ ಅಧಿವೇಶನಕ್ಕೆ ಗರಿಷ್ಠ 25 ಜನರನ್ನು ಮಾತ್ರ ನಿಯೋಜನೆ ಮಾಡುವುದು. ಉದಾಹರಣೆಗೆ ಒಂದು ತಾಲ್ಲೂಕಿನಲ್ಲಿ 15 ಆರೋಗ್ಯ ಸಂಸ್ಥೆಗಳಿದ್ದರೆ ಒಟ್ಟು 45 ತರಬೇತುದಾರರು ಅಗತ್ಯವಿದ್ದು, ಈ ತರಬೇತುದಾರರಲ್ಲಿ ಬೆಳಗಿನ ಅಧಿವೇಶನದಲ್ಲಿ ಎಂಟು ಸಂಸ್ಥೆಗಳ 24 ಜನರನ್ನು ಮಧ್ಯಾಹ್ನದ ಅಧಿವೇಶನದಲ್ಲಿ ಏಳು ಸಂಸ್ಥೆಗಳ 21 ಜನರನ್ನು ನಿಯೋಜನೆ ಮಾಡುವುದು.
4. ತರಬೇತಿ ಸಭಾಂಗಣದಲ್ಲಿ ಆಸನಗಳ ನಡುವೆ ಕನಿಷ್ಠ ಒಂದು ಮೀಟರ್ ಅಂತರವನ್ನು ಕಾಯ್ದುಕೊಳ್ಳುವಂತೆ ಆಸನ ವ್ಯವಸ್ಥೆ ಮಾಡುವುದು ಹಾಗೂ ಖಾತ್ರಿಪಡಿಸಿಕೊಳ್ಳುವುದು.
5. ತರಬೇತಿ ಸಭಾಂಗಣವನ್ನು ತರಬೇತಿ ಅಧಿವೇಶನ ಆರಂಭವಾಗುವ ಅರ್ಧ ಗಂಟೆ ಮುಂಚೆ ಸೋಡಿಯಂ ಹೈಪೋಕ್ಲೋರೈಟ್ ದ್ರಾವಣದಲ್ಲಿ ಶುಚಿಗೊಳಿಸುವುದು.
6. ಪ್ರತಿ ಆರೋಗ್ಯ ಸಂಸ್ಥೆಯ ವ್ಯಾಪ್ತಿಯಿಂದ ಗುರುತಿಸಲಾದ ತರಬೇತುದಾರರ ವಿವರವನ್ನು ದಿ॥01.04.2020 ರೊಳಗೆ ಆಶಾ ಕಾರ್ಯಕ್ರಮ ವಿಭಾಗಕ್ಕೆ ಈ-ಮೇಲ್ ಮಾಡುವುದು.
7. ತರಬೇತಿಯನ್ನು ತಾ॥ ಆರೋಗ್ಯಾಧಿಕಾರಿಗಳು ತಾಲ್ಲೂಕು ಪಂಚಾಯತ್‌ನ ಕಾರ್ಯನಿರ್ವಹಣಾ ಅಧಿಕಾರಿಗಳು, ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಸಮನ್ವಯದೊಂದಿಗೆ ಆಯೋಜನೆ ಮಾಡುವುದು.
8. ತರಬೇತಿಯ ಹಿಂದಿನ ದಿನವೇ ಕ್ಷೇತ್ರ ಸಂಪನ್ಮೂಲ ಕೇಂದ್ರದ ಕ್ಷೇತ್ರ ಸಮನ್ವಯಾಧಿಕಾರಿಗಳನ್ನು ಭೇಟಿ ನೀಡಿ ಅಗತ್ಯ ವ್ಯವಸ್ಥೆಗಳನ್ನು ಖಾತ್ರಿಪಡಿಸಿಕೊಳ್ಳುವುದು.
9. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿಯಿಂದ ತಾಲ್ಲೂಕುಗಳಿಗೆ ನಿಯೋಜನೆ ಮಾಡುವ ನೋಡಲ್ ಅಧಿಕಾರಿಗಳು ಕಡ್ಡಾಯವಾಗಿ ತರಬೇತಿಯ ದಿನ ಹಾಜರಿದ್ದು, ತರಬೇತಿ ಪ್ರಕ್ರಿಯೆಯನ್ನು ಮೇಲ್ವಿಚಾರಣೆ ಮಾಡುವುದು. ಇವರಿಗೆ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಜಿಲ್ಲಾ ಮಟ್ಟದಲ್ಲಿ ವಿವಿಧ ಕಾರ್ಯಕ್ರಮಗಳಿಗೆ ನೇಮಕವಾಗಿರುವ ಸಮಲೋಚಕರು ಸಹಕರಿಸುವುದು. ಇವರನ್ನು ತಾಲ್ಲೂಕುವಾರು ಜಿಲ್ಲಾ ಆ.ಕು.ಕ ಅಧಿಕಾರಿಗಳು ನಿಯೋಜನೆ ಮಾಡುವುದು.
10. ತರಬೇತಿಯಲ್ಲಿ ತಾ॥ ಆರೋಗ್ಯ ಅಧಿಕಾರಿಗಳ ಕಚೇರಿಯ ಮೇಲ್ವಿಚಾರಣಾ ಸಿಬ್ಬಂದಿಗಳಾದ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳು, ಹಿರಿಯ ಪುರುಷ ಮತ್ತು ಮಹಿಳಾ ಸಹಾಯಕರು, ತಾ॥ ಕಾರ್ಯಕ್ರಮ ವ್ಯವಸ್ಥಾಪಕರು, ತಾ॥ ಆಶಾ ಮೇಲ್ವಿಚಾರಕರು ಕಡ್ಡಾಯವಾಗಿ ತರಬೇತಿಗೆ ಹಾಜರಾಗುವುದು.
11. ಜಿಲ್ಲಾ ಮಟ್ಟದಲ್ಲಿ ತರಬೇತಿಯ ನೋಡಲ್ ಅಧಿಕಾರಿಯಾಗಿ ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳು ಕಾರ್ಯನಿರ್ವಹಿಸುವುದು ಹಾಗೂ ತರಬೇತಿಯನ್ನು ಜಿಲ್ಲಾ ಸರ್ವೇಕ್ಷಣಾ ಅಧಿಕಾರಿಗಳ ಸಮನ್ವಯದೊಂದಿಗೆ ಆಯೋಜನೆ ಮಾಡುವುದು. ಇವರಿಗೆ ಜಿಲ್ಲಾ ಫ್ಲೋರೋಸಿಸ್ ಸಮಾಲೋಚಕರು, ಜಿಲ್ಲಾ ಕಾರ್ಯಕ್ರಮ ಸಂಯೋಜಕರು-ವಿಶ್ವಾಸ್ ಆಂದೋಲನ ಮತ್ತು ಜಿಲ್ಲಾ ಆಶಾ ಮೇಲ್ವಿಚಾರಕರು ಸಹಕರಿಸುವುದು.
12. ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ನೋಡಲ್ ಅಧಿಕಾರಿಯಾಗಿ ನಗರ ಯೋಜನಾ ನಿರ್ವಹಣಾ ಅಧಿಕಾರಿಗಳು ಕಾರ್ಯನಿರ್ವಹಿಸುವುದು ಹಾಗೂ ತರಬೇತಿಯನ್ನು ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳ ಜೊತೆ ಸಮನ್ವಯದೊಂದಿಗೆ ಆಯೋಜನೆ ಮಾಡುವುದು.

13. ವಲಯವಾರು ಉಸ್ತುವಾರಿಗೆ ಕಾರ್ಯಕ್ರಮ ಅಧಿಕಾರಿಗಳನ್ನು ನಿಯೋಜನೆ ಮಾಡುವುದು ಇವರಿಗೆ ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನದ ವತಿಯಿಂದ ನೇಮಕವಾಗಿರುವ ಸಮಾಲೋಚಕರು ಸಹಕರಿಸುವುದು.
14. ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯ ತರಬೇತುದಾರರನ್ನು ಬೆಂಗಳೂರು ಉತ್ತರ-1, ಬೆಂಗಳೂರು ಉತ್ತರ-4, ಬೆಂಗಳೂರು ದಕ್ಷಿಣ-3, ಬೆಂಗಳೂರು ದಕ್ಷಿಣ-4 ರ ಕ್ಷೇತ್ರ ಶಿಕ್ಷಣಾಧಿಕಾರಿಗಳ ವ್ಯಾಪ್ತಿಯ ಕ್ಷೇತ್ರ ಸಂಪನ್ಮೂಲ ಕೇಂದ್ರಕ್ಕೂ, ಬಿ.ಬಿ.ಎಂ.ಪಿ ವ್ಯಾಪ್ತಿಯ ತರಬೇತುದಾರರನ್ನು ಬೆಂಗಳೂರು ಉತ್ತರ-2 ಬೆಂಗಳೂರು ಉತ್ತರ-3, ಬೆಂಗಳೂರು ದಕ್ಷಿಣ-1, ಬೆಂಗಳೂರು ದಕ್ಷಿಣ-3 ರ ಕ್ಷೇತ್ರ ಶಿಕ್ಷಣಾಧಿಕಾರಿಗಳ ವ್ಯಾಪ್ತಿಯ ಕ್ಷೇತ್ರ ಸಂಪನ್ಮೂಲ ಕೇಂದ್ರಕ್ಕೂ, ನಿಯೋಜನೆ ಮಾಡುವುದು.
15. ತರಬೇತಿಗೆ ಹಾಜರಾಗುವ ಶಿಬಿರಾರ್ಥಿಗಳಿಗೆ ಊಟೋಪಚಾರದ ವ್ಯವಸ್ಥೆಯನ್ನು ರೂ.75/- ರ ಮಿತಿಯಲ್ಲಿ ಮಾಡುವುದು.
16. ಪ್ರಾಥಮಿಕ ಆರೋಗ್ಯ ಕೇಂದ್ರದ ಮಟ್ಟದ ತರಬೇತಿಯನ್ನು ದಿ॥ 04.04.2020 ರಿಂದ ದಿ॥06.04.2020 ರವರೆಗೆ ಪ್ರಾಥಮಿಕ ಆರೋಗ್ಯ ಕೇಂದ್ರದ ಸಭಾಂಗಣ ಅಥವಾ ಪಿ.ಹೆಚ್.ಸಿ ಗೆ ಸಂಪರ್ಕ ವ್ಯವಸ್ಥೆಯ ಸಮಸ್ಯೆಯಿದ್ದರೆ ಎಲ್ಲರಿಗೂ ಅನುಕೂಲಕರವಾದ ಉಪಕೇಂದ್ರ ಅಥವಾ ಆರೋಗ್ಯ ಮತ್ತು ಕ್ಷೇಮ ಕೇಂದ್ರದ ಸಭಾಂಗಣದಲ್ಲಿ ಆಯೋಜನೆ ಮಾಡುವುದು.
17. ಪ್ರತಿ ತಂಡದಲ್ಲಿ 25 ಕ್ಕಿಂತ ಹೆಚ್ಚು ಶಿಬಿರಾರ್ಥಿಗಳನ್ನು ನಿಯೋಜನೆ ಮಾಡಬಾರದು
18. ಒಂದು ಉಪಕೇಂದ್ರದ ವ್ಯಾಪ್ತಿಯ ಎಲ್ಲಾ ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು ಮತ್ತು ಕಿರಿಯ ಮಹಿಳಾ ಆರೋಗ್ಯ ಸಹಾಯಕರನ್ನು ಒಟ್ಟಿಗೆ ಸೇರಿಸಿ ತರಬೇತಿ ಆಯೋಜನೆ ಮಾಡುವುದು.
19. ಕ್ಷೇತ್ರ ಮಟ್ಟದ ತರಬೇತಿಯು ಮೂರು ಗಂಟೆಗಳ ಅವಧಿಯಾಗಿದ್ದು, (ಬೆಳಗ್ಗೆ 10.00 ರಿಂದ 01.00 ಮತ್ತು 02.00 ರಿಂದ 05.00 ಗಂಟೆ) ಎರಡು ಅಧಿವೇಶನಗಳಲ್ಲಿ ತರಬೇತಿಯನ್ನು ನಿರ್ವಹಣೆ ಮಾಡುವುದು.
20. ತರಬೇತಿ ಸಭಾಂಗಣದಲ್ಲಿ ಆಸನಗಳ ನಡುವೆ ಕನಿಷ್ಠ ಒಂದು ಮೀಟರ್ ಅಂತರವನ್ನು ಕಾಯ್ದುಕೊಳ್ಳುವಂತೆ ಆಸನ ವ್ಯವಸ್ಥೆ ಮಾಡುವುದು ಹಾಗೂ ಖಾತ್ರಿಪಡಿಸಿಕೊಳ್ಳುವುದು.
21. ತರಬೇತಿ ಸಭಾಂಗಣವನ್ನು ತರಬೇತಿ ಅಧಿವೇಶನ ಆರಂಭವಾಗುವ ಅರ್ಧ ಗಂಟೆ ಮುಂಚೆ ಸೋಡಿಯಂ ಹೈಪೋಕ್ಲೋರೈಟ್ ದ್ರಾವಣದಲ್ಲಿ ಶುಚಿಗೊಳಿಸುವುದು.
22. ಈ ತರಬೇತಿಯನ್ನು ಮೇಲುಸ್ತುವಾರಿ ಮಾಡಲು ತಾ॥ ಆರೋಗ್ಯಾಧಿಕಾರಿಗಳು ತಾ॥ ಮಟ್ಟದ ಮೇಲ್ವಿಚಾರಣಾ ಸಿಬ್ಬಂದಿಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರವಾರು ನಿಯೋಜನೆ ಮಾಡುವುದು.
23. ಆಶಾ ಕಾರ್ಯಕರ್ತೆಯರು ಮತ್ತು ಅಂಗನವಾಡಿ ಕಾರ್ಯಕರ್ತೆಯರಿಗೆ ವಾಸ್ತವಿಕ ಪ್ರಯಾಣ ವೆಚ್ಚ ರೂ.50/-(ಗರಿಷ್ಠ ಮಿತಿ)ಗಳನ್ನು ನೀಡುವುದು. ಹಾಗೂ ರೂ.75/- ರ ಮಿತಿಯಲ್ಲಿ ಊಟೋಪಚಾರದ ವ್ಯವಸ್ಥೆ ಮಾಡುವುದು.
24. ತಾಲ್ಲೂಕು ಮಟ್ಟದ ತರಬೇತುದಾರರ ತರಬೇತಿಯ ನಿರ್ವಹಣೆಗೆ ಪೂರಕವಾಗಿ ಕ್ಷೇತ್ರ ಸಂಪನ್ಮೂಲ ಕೇಂದ್ರದ ಬಾಡಿಗೆಯ ಮೊತ್ತವನ್ನು ನಿರ್ದೇಶನಾಲಯದ ವತಿಯಿಂದ ಡಿ.ಎಸ್.ಇ.ಆರ್.ಟಿ ಗೆ ನೇರವಾಗಿ ಪಾವತಿ ಮಾಡಲಾಗುವುದು. ಶುಚಿತ್ವ ಹಾಗೂ ಪ್ರಾಸಂಗಿಕ ವೆಚ್ಚಗಳಿಗೆ ಪ್ರತಿ ಕೇಂದ್ರಕ್ಕೆ ರೂ.500/-ಗಳನ್ನು ಬಿಡುಗಡೆ ಮಾಡಲಾಗಿದೆ.

ಈ ತರಬೇತಿಗೆ ತಗಲುವ ಅಂದಾಜು ಆಯ-ವ್ಯಯವನ್ನು ಅನುಬಂಧ.1 ಮತ್ತು 2 ರಲ್ಲಿ ಲಗತ್ತಿಸಿದೆ.

25. ಮೇಲ್ಕಂಡ ಖರ್ಚುಗಳನ್ನು ರಾಷ್ಟ್ರೀಯ ಆರೋಗ್ಯ ಅಭಿಯಾನದ 2019-20 ನೇ ಸಾಲಿನ ಆರ್.ಓ.ಪಿಯ ಎಫ್.ಎಂ.ಆರ್ ಕೋಡ್ 3.1.2.3 ಅಡಿಯಲ್ಲಿ ಭರಿಸುವುದು ಹಾಗೂ ಬಿ.ಬಿ.ಎಂ.ಪಿ ವ್ಯಾಪ್ತಿಯ ಅಧಿಕಾರಿಗಳ ಮತ್ತು ಸಿಬ್ಬಂದಿಗಳಿಗೆ ಸಂಬಂಧಿಸಿದ ಖರ್ಚುಗಳನ್ನು ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾ ಆರ್.ಓ.ಪಿಯಡಿ ಭರಿಸುವುದು.

26. ತಾಲ್ಲೂಕು ಮಟ್ಟದ ತರಬೇತಿ ಹಾಗೂ ಕ್ಷೇತ್ರ ಮಟ್ಟದ ತರಬೇತಿಯ ದಿನ ತರಬೇತಿ ಅಧಿವೇಶನಗಳ ಕನಿಷ್ಠ ನಾಲ್ಕು ಛಾಯಾಚಿತ್ರಗಳನ್ನು (ಬೆಳಗ್ಗೆ 10.30, ಮಧ್ಯಾಹ್ನ 12.00, ಮಧ್ಯಾಹ್ನ 03.00 ಮತ್ತು ಸಂಜೆ 05.30) ಸಮಯ ಮತ್ತು ದಿನಾಂಕದೊಂದಿಗೆ ಸೆರೆಹಿಡಿದು ಛಾಯಾಚಿತ್ರಗಳೊಂದಿಗೆ ಹಾಜರಾತಿ ಮತ್ತು ಸಂಕ್ಷಿಪ್ತ ವರದಿಗಳನ್ನು ತರಬೇತಿ ಮುಗಿದ ಕೂಡಲೇ ಕಡ್ಡಾಯವಾಗಿ ತಾ॥ ಆರೋಗ್ಯಾಧಿಕಾರಿಗಳು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳ ಸಹಿಯೊಂದಿಗೆ ಜಿಲ್ಲಾ ಆ.ಕು.ಕ ಅಧಿಕಾರಿಗಳು ಮತ್ತು ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳ ಕಚೇರಿಗೆ ಈ-ಮೇಲ್ ಮಾಡುವುದು.

27. ಜಿಲ್ಲಾ ಆ.ಕು.ಕ ಅಧಿಕಾರಿಗಳು ಹಾಗೂ ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳು ಕ್ರೋಡಿಕೃತ ಹಾಜರಾತಿಯನ್ನು ದೃಡಿಕರಿಸಿ ದಿ॥08.04.2020 ರೊಳಗೆ ಸಲ್ಲಿಸುವುದು.

28. ತಾ॥ ಆಶಾ ಮೇಲ್ವಿಚಾರಕರು ಹಾಗೂ ತಾ॥ ಕಾರ್ಯಕ್ರಮ ವ್ಯವಸ್ಥಾಪಕರು ಗೂಗಲ್ ಫಾರಂ ಮುಖೇನ ಹಾಜರಾತಿಯನ್ನು ಹಾಗೂ ಫ಼ಿಫ಼್ಲಕಾರ್ ಮುಖೇನ ತರಬೇತಿ ಅಧಿವೇಶನಗಳ ಭಾವಚಿತ್ರಗಳನ್ನು ಆಶಾ ಕಾರ್ಯಕ್ರಮಕ್ಕೆ ಸಲ್ಲಿಸುವುದು.

29. ತರಬೇತಿಯ ದಿನ ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಆರೋಗ್ಯ ಇಲಾಖೆಯ ಇನ್ನಿತರ ಸಿಬ್ಬಂದಿಗಳ ಚಲನವಲನದ ಬಗ್ಗೆ ಸಂಬಂಧಪಟ್ಟ ಪೋಲಿಸ್ ಠಾಣೆಯ ಠಾಣಾಧಿಕಾರಿಗಳ ಗಮನಕ್ಕೆ ತರುವುದು.

30. ತರಬೇತಿ ಕ್ರಿಯಾ ಯೋಜನೆ ಹಾಗೂ ವಿವರಗಳನ್ನು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳಿಗೆ ಸಲ್ಲಿಸುವುದು ಹಾಗೂ ಅಗತ್ಯ ಮಾರ್ಗದರ್ಶನ ಪಡೆಯುವುದು.

**ವಿ.ಸೂ:** ತರಬೇತಿ ನಡೆಯುವ ಸಂದರ್ಭದಲ್ಲಿ ಕಡ್ಡಾಯವಾಗಿ ಸಾಮಾಜಿಕ ಅಂತರ ಹಾಗೂ ಶುಚಿತ್ವವನ್ನು ಕಾಯ್ದುಕೊಳ್ಳಬೇಕು, ಯಾವುದೇ ರೀತಿಯ ವ್ಯತಯಗಳು ಕಂಡುಬಂದಲ್ಲಿ ಆಯಾಯ ಹಂತದ ಅಧಿಕಾರಿಗಳನ್ನೇ ಜವಾಬ್ದಾರರನ್ನಾಗಿ ಮಾಡಲಾಗುವುದು.

**"ಎಚ್ಚರವಿರಲಿ ಭಯಬೇಡ"**

21/3/2020

**ಅಭಿಯಾನ ನಿರ್ದೇಶಕರು (ಎನ್.ಹೆಚ್.ಎಂ)**

**ಪ್ರತಿ: ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಿದೆ.**

1. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ.
2. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ. ಕರ್ನಾಟಕ ಸರ್ಕಾರ.

3. ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
4. ಮಾನ್ಯ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಕರ್ನಾಟಕ ಸರ್ಕಾರ
5. ಮಾನ್ಯ ವಿಶೇಷ ಆಯುಕ್ತರು (ಆರೋಗ್ಯ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
6. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ.
7. ಜಿಲ್ಲಾಧಿಕಾರಿಗಳು, ಎಲ್ಲಾ ಜಿಲ್ಲೆಗಳು.
8. ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಎಲ್ಲಾ ಜಿಲ್ಲೆಗಳು.
9. ಜಿಲ್ಲಾ ಪೋಲಿಸ್ ಅಧೀಕ್ಷಕರು, ಎಲ್ಲಾ ಜಿಲ್ಲೆಗಳು.
10. ಉಪ ಪೋಲಿಸ್ ಆಯುಕ್ತರು (ಆಡಳಿತ), ಬೆಂಗಳೂರು ನಗರ ಕಮೀಷನರೇಟ್
11. ಉಪ ಪೋಲಿಸ್ (ಕಾನೂನು ಮತ್ತು ಸುವ್ಯವಸ್ಥೆ), ಮೈಸೂರು, ಮಂಗಳೂರು, ಬೆಳಗಾವಿ, ಹುಬ್ಬಳ್ಳಿ-ಧಾರವಾಡ, ಕಲಬುರಗಿ ಕಮೀಷನರೇಟ್
12. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು,
13. ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು,
14. ಮುಖ್ಯ ಆರ್ಥಿಕ ಅಧಿಕಾರಿಗಳು, ರಾಷ್ಟ್ರೀಯ ಆರೋಗ್ಯ ಅಭಿಯಾನ,
15. ವಿಭಾಗೀಯ ಜಂಟಿ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಎಲ್ಲಾ ವಿಭಾಗಗಳು.
16. ಮುಖ್ಯ ಆರೋಗ್ಯಾಧಿಕಾರಿಗಳು (ಸಾರ್ವಜನಿಕ ಆರೋಗ್ಯ). ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.

**ಪ್ರತಿ : ಮುಂದಿನ ಕ್ರಮಕ್ಕಾಗಿ**

1. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಎಲ್ಲಾ ಜಿಲ್ಲೆಗಳು
2. ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.
3. ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳು., ಎಲ್ಲಾ ಜಿಲ್ಲೆಗಳು
4. ಜಿಲ್ಲಾ ಸರ್ವೇಕ್ಷಣಾ ಅಧಿಕಾರಿಗಳು, ಎಲ್ಲಾ ಜಿಲ್ಲೆಗಳು.
5. ನಗರ ಯೋಜನಾ ನಿರ್ವಹಣಾ ಅಧಿಕಾರಿಗಳು, ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನ, ಬಿ.ಬಿ.ಎಂ.ಪಿ, ಬೆಂಗಳೂರು.
6. ತಾ॥ ಆರೋಗ್ಯಾಧಿಕಾರಿಗಳು, ಎಲ್ಲಾ ತಾಲ್ಲೂಕುಗಳು
7. ಶಿಶು ಅಭಿವೃದ್ಧಿ ಯೋಜನಾ ಅಧಿಕಾರಿಗಳು, ಎಲ್ಲಾ ತಾಲ್ಲೂಕುಗಳು
8. ಕಚೇರಿ ಪ್ರತಿ